 **ಎಂವಿಸಿಃ 503/2025 ಪಿಡಬ್ಲ್ಯೂ 2 ಡಾ.ಹರ್ಷಿತ. ಹೆಚ್.ಉಡುಪ**

**ಸಾಕ್ಷಿಯನ್ನು ದಿಃ 17.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಅರ್ಜಿದಾರರಿಗೆ ಸಂಬಂಧಿಸಿದ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 17 ಎಂದು,

ಒಟ್ಟು 2 ಎಕ್ಸ್ ರೇ ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 18 ಎಂದು,

ಹೊರರೋಗಿ ದಾಖಲೆಯನ್ನು ಹಾಜರು ಪಡಿಸಿದ್ದು ನಿಪಿ.19 ಎಂದು,

ಡಿಸೆಬಿಲಿಟಿ ಸರ್ಟಿಫಿಕೇಟ್ ಅನ್ನು ಹಾಜರು ಪಡಿಸಿದ್ದು ಅದನ್ನು ನಿಪಿ. 20 ಎಂದು,

ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 21 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – 3 ನೇ ಎದುರುದಾರರ ಪರ ವಕೀಲರಿಂದ**

1. ಗಾಯಾಳವನ್ನು ಮೊದಲಿಗೆ ಬಾಲಕೃಷ್ಣಗೌಡ ವೈದ್ಯರು ಪರೀಕ್ಷಿಸಿರುತ್ತಾರೆ. ಆ ನಂತರ ನಾನು ಪರೀಕ್ಷಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ಸರಿ ಇದೆ. ಗಾಯಾಳುವಿನ ಜೊತೆ ಬಂದಿರುವವರು ಹಾಗೂ ಗಾಯಾಳು ಹೇಳಿದ ಮೇರೆಗೆ ಅಪಘಾತದ ಬಗ್ಗೆ ನಮೂದಿಸಿದ್ದೇನೆ. ನಮ್ಮ ಆಸ್ಪತ್ರೆಗೆ ಬರುವ ಮೊದಲು ಒಂದೆರಡು ಆಸ್ಪತ್ರೆಗೆ ಹೋಗಿ ಬಂದಿರುವುದಾಗಿ ಹೇಳಿದ್ದು ಯಾವ ಆಸ್ಪತ್ರೆ ಎಂದು ನಮಗೆ ತಿಳಿದಿಲ್ಲ. ನಾನು ಗಾಯಾಳುವನ್ನು ಎಮರ್ಜೆನ್ಸಿ ಯೂನಿಟ್ ನಲ್ಲಿ ನೋಡಿದ್ದೇನೆ. ಶಸ್ತರ ಚಿಕಿತ್ಸೆಯನ್ನು ಡಾ.ಬಾಲಕೃಷ್ಣಗೌಡ ಮಾಡಿದ್ದಾರೆ. ಬಲಗಾಲಿಗೆ ನಾವು ಚಿಕಿತ್ಸೆ ನೀಡಿದ್ದೇವೆ.

2. ಅರ್ಜಿದಾರರು ಆಗಾಗ್ಗೆ ಹೊರರೋಗಿಯಾಗಿ ಚಿಕಿತ್ಸೆಗೆ ಬಂದಿದ್ದಾರೆ. ಆ ಬಗ್ಗೆ ದಾಖಲೆ ನಮ್ಮ ಬಳಿ ಇಲ್ಲ. ಇತ್ತೀಚೆಗೆ 04.11.2025 ಕ್ಕೆ ಪರೀಕ್ಷಿಸಿದ್ದೇನೆ. ಶಸ್ತ್ರ ಚಿಕಿತ್ಸೆಯ ಶೀಟ್ ನಲ್ಲಿ

ನನ್ನ ಹೆಸರಿಲ್ಲ ಎಂದರೆ ಸರಿ. ನಾನು Followup ಮಾಡುವಾಗ ನೋಡಿದ್ದೇನೆ ಎನ್ನುತ್ತಾರೆ. ಇತ್ತೀಚಿನ ಎಕ್ಸ್ ರೇ ಪ್ರಕಾರ ಮೂಳೆಗಳು ಕೂಡಿಕೊಂಡಿವೆ ಎಂದರೆ ಸರಿ. ಸರ್ಜಿಕಲ್ ನೋಟ್ಸ್ ನಲ್ಲಿ ಗಾಯಾಳುವಿನ ಸ್ಥಿತಿ ಗತಿಗಳ ಬಗ್ಗೆ ನಮೂದಿಸಿರುತ್ತಾರೆ. ಇತ್ತೀಚಿನ ಎಕ್ಸ್ ರೇ ಪ್ರಕಾರ ಅರ್ಜಿದಾರರಿಗೆ ಮಾಲ್ಯೂನಿಯನ್ ಆಗಿಲ್ಲ. ಅರ್ಜಿದಾರರಿಗೆ ಇನ್ಫೆಕ್ಷನ್ ಆಗಿಲ್ಲ. ಸ್ಟಿಫ್ನೆಸ್ ಇದೆ. Extra points ಇಲ್ಲ. ನ್ಯೂನತೆಯನು ನಿರ್ಧಿಷ್ಟ ಕಾಲಿಗೆ ನಿರ್ಧರಿಸಿದ್ದೇನೆ. ನ್ಯೂನತಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. Clinical findings ನ್ನು ಒ.ಪಿ.ಡಿ ಶೀಟ್ ನಲ್ಲಿ ನಮೂದಿಸಿದ್ದೇನೆ. ಇಪ್ಲಾಂಟ್ಸ್ ನ್ನು ಮುಂದೆ ತೆಗೆಯಬೇಕು. ಅದನ್ನು ಹೊರತುಪಡಿಸಿ ಚಿಕಿತ್ಸೆ ಪೂರ್ಣಗೊಂಡಿದೆ. ಅರ್ಜಿದಾರರ ಉದ್ಯೋಗದ ಬಗ್ಗೆ ಗೊತ್ತಿಲ್ಲ. ಕುಳಿತುಕೊಂಡು ಸೂಪರ್ ವೈಸಿಂಗ್ ಕೆಲಸ ಮಾಡಬಹುದು. ಮುಂದೆ ನ್ಯೂನತೆ ಕಡಿಮೆ ಆಗುವ ಸಾಧ್ಯತೆ ಇಲ್ಲ. ನ್ಯೂನತೆಯನ್ನು ಉತ್ಪ್ರೇಕ್ಷೆಯಿಂದ ನೀಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.